# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 211 |
| ಸದಸ್ಯರ ಹೆಸರು | : | ಶ್ರೀ. ಎಸ್.ಎಲ್.ಧರ್ಮೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.12.2018 |
| ಉತ್ತರಿಸುವ ಸಚಿವರು | : | ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಿಕ್ಕಮಗಳೂರು ಜಿಲ್ಲೆಯ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇಷ್ಟು: | ರಾಜ್ಯದಲ್ಲಿ ಹಾಲಿ ಇರುವ 1512 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು 2017-18ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಹಂತ ಹಂತವಾಗಿ ಮೇಲ್ದರ್ಜೆಗೇರಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರಂತೆ 2017-18 ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಳಕಂಡಂತೆ 7 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ.<br><br>ಕ್ರ.ಸಂ / ತಾಲೂಕು / ಮೇಲ್ದರ್ಜೆಗೇರಿಸಿದ ಪ್ರಾ.ಪ.ಚಿ.ಗಳ ವಿವರ,<br>01 / ಚಿಕ್ಕಮಗಳೂರು / ಆವುತಿ<br>02 / ಚಿಕ್ಕಮಗಳೂರು / ವಸ್ತಾರೆ<br>03 / ಕೊಪ್ಪ / ನಾರ್ವೆ<br>04 / ತರೀಕೆರೆ / ಬೇಗೂರು<br>05 / ಕಡೂರು / ಡಿ.ಪಟ್ಟಣಗೆರೆ<br>06 / ಕಡೂರು / ವೈ.ಮಲ್ಲಾಪುರ<br>07 / ಮೂಡಿಗೆರೆ / ಊರುಬಗೆ<br>ಒಟ್ಟು / 07<br><br>ಚಿಕ್ಕಮಗಳೂರು ಜಿಲ್ಲೆಯಲ್ಲಿರುವ 38 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು 2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಹಂತಹಂತವಾಗಿ ಮೇಲ್ದರ್ಜೆಗೇರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಎಷ್ಟು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ; ಅವುಗಳು ಯಾವುವು; | 2018-19ನೇ ಸಾಲಿನಲ್ಲಿ 400 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಸದರಿ 400 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಪೈಕಿ |

| | | |
|---|---|---|
| | | ಚಿಕ್ಕಮಗಳೂರು ಜಿಲ್ಲೆಗೆ ಸೇರಿದ 08 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಸೇರಿರುತ್ತದೆ. ಅವುಗಳ ವಿವರ ಈ ಕೆಳಕಂಡಂತೆ ನೀಡಲಾಗಿದೆ. |

| ಕ್ರ.ಸಂ | ತಾಲೂಕು | ಮೇಲ್ದರ್ಜೆಗೇರಿಸಲಾಗುತ್ತಿರುವ ಪ್ರಾ.ಪ.ಚಿ.ಗಳ ವಿವರ |
|---|---|---|
| 01 | ಚಿಕ್ಕಮಗಳೂರು | ಅಲ್ಲಂಪುರ |
| 02 | ಚಿಕ್ಕಮಗಳೂರು | ಸಿಂದಿಗೆರೆ |
| 03 | ಚಿಕ್ಕಮಗಳೂರು | ಶಿರವಾಸೆ |
| 04 | ಚಿಕ್ಕಮಗಳೂರು | ಉದ್ದೆಗೋರನಹಳ್ಳಿ |
| 05 | ಮೂಡಿಗೆರೆ | ಜಾವಳಿ |
| 06 | ಕಡೂರು | ಉಳಿಗೆರೆ |
| 07 | ಕಡೂರು | ಹೊನ್ನೇನಹಳ್ಳಿ |
| 08. | ಕಡೂರು | ಗಂಗನಹಳ್ಳಿ. |
| | ಒಟ್ಟು | 08 |

| | | |
|---|---|---|
| ಇ) | ಬಾಕಿ ಇರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು ಯಾವಾಗ: | 2018-19 ನೇ ಸಾಲಿನಲ್ಲಿ 08 ಪ್ರಾ. ಪ.ಚಿ. ಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಇನ್ನುಳಿದ 30 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು 2019-20, 2020-21ನೇ ಸಾಲುಗಳಲ್ಲಿ ಹಂತ ಹಂತವಾಗಿ ಮೇಲ್ದರ್ಜೆಗೇರಿಸಲಾಗುವುದು. |
| ಈ) | ಮೇಲ್ದರ್ಜೆಗೇರಿಸಿದ ಪಶುಚಿಕಿತ್ಸಾಲಯಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗುವುದೇ? (ವಿವರ ನೀಡುವುದು) | ಮೇಲ್ದರ್ಜೆಗೇರಿಸಿದ ಪಶು ಚಿಕಿತ್ಸಾಲಯಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ಒದಗಿಸಲು ಕ್ರಮ ವಹಿಸಲಾಗಿದೆ. |

ಸಂ: ಪಸಂಮೀ 131 ಪಸಸೇ 2018

(ವೆಂಕಟ್‌ರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು